**ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡ, ಶ್ರೀ ಮಧು ಜಿ. ಮಾದೇಗೌಡ ಮತ್ತು ಶ್ರೀ ದಿನೇಶ್ ಗೂಳಿಗೌಡ ರವರುಗಳು ನಿಯಮ 72 ರಡಿ ಪ್ರಸ್ತಾಪಿಸಿದ ಗಮನ ಸೆಳೆಯುವ ಸೂಚನೆಗೆ ಉತ್ತರ**

## ಸೂಚನೆ:

**"ಹಸಿರುಪಟ್ಟಿಯಲ್ಲಿರುವ ರೈತರಿಗೆ ಸಾಲ ಮನ್ನಾ ಯೋಜನೆಯಡಿಯಲ್ಲಿ ತಲಾ ರೂ.50,000 ಹಾಗೂ 01 ಲಕ್ಷ ರೂಪಾಯಿಗಳನ್ನು ಮನ್ನಾ ಮಾಡಿದ್ದರೂ ಇದುವರೆವಿಗೆ ಅವರ ಖಾತೆಗೆ ಇದುವರೆವಿಗೂ ಹಣ ಜಮೆ ಆಗದೆ ಇರುವುದರಿಂದ ಅವರಿಗೆ ಹೊಸ ಸಾಲಗಳು ಸಿಗದೆ ಇರುವುದರಿಂದ ಉಂಟಾದ ಗಂಭೀರ ಸಮಸ್ಯೆ ಕುರಿತು ಮಾನ್ಯ ಮುಖ್ಯ ಮಂತ್ರಿಗಳ ಗಮನಸೆಳೆಯಬಯಸುತ್ತೇವೆ."**

## ಉತ್ತರ

ಸರ್ಕಾರದ 2017 ರ ರೂ.50,000/- ಗಳ ಸಾಲ ಮನ್ನಾ ಯೋಜನೆಯಡಿಯಲ್ಲಿ ರಾಜ್ಯದ ರೈತರು ಸಹಕಾರ ಸಂಘಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು ದಿ.20.06.2017 ಕ್ಕೆ ಇರುವ ಹೊರಬಾಕಿಯಲ್ಲಿ ಗರಿಷ್ಟ ರೂ.50,000/- ಗಳವರೆಗಿನ ಸಾಲದ ಮೊತ್ತವನ್ನು ಸಂಪೂರ್ಣ ಮನ್ನಾ ಮಾಡಿ ಸರ್ಕಾರವು ಆದೇಶ ಸಂಖ್ಯೆ ಸಿಒ 313 ಸಿಎಲ್‌ಎಸ್ 2017 ದಿ.23.06.2017 ರೀತ್ಯಾ ಆದೇಶ ಹೊರಡಿಸಿರುತ್ತದೆ.

ಸರ್ಕಾರದ ಸಾಲ ಮನ್ನಾ ಯೋಜನೆ 2017 ರ ಪ್ರಕಾರ ರಾಜ್ಯದ ರೈತರಿಗೆ ರೂ.50,000/- ಗಳ ಸಾಲ ಮನ್ನಾ ಮಾಡಿದಲ್ಲಿ 22.27 ಲಕ್ಷ ರೈತರ ಪರವಾಗಿ ಸರ್ಕಾರಕ್ಕೆ ಅಂದಾಜು ರೂ.8,164.99 ಕೋಟಿಗಳ ಹೊರೆ ಬೀಳುತ್ತದೆ ಎಂದು ಅಂದಾಜಿಸಲಾಗಿತ್ತು. ಈ ಯೋಜನೆಯಲ್ಲಿ ಅಂತಿಮವಾಗಿ 21.57 ಲಕ್ಷ ರೈತರಿಗೆ ರೂ. 7,760.68 ಕೋಟಿ ಸಾಲ ಮನ್ನಾ ಮಾಡಲು ಅರ್ಹತೆ ಗುರುತಿಸಲಾಗಿದೆ. ಈ ಪೈಕಿ ಸರ್ಕಾರದಿಂದ 21.03 ಲಕ್ಷ ರೈತರ ರೂ. 7,631.01 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಬಾಕಿ 0.55 ಲಕ್ಷ ರೈತರಿಗೆ ಸಂಬಂಧಿಸಿದಂತೆ ರೂ. 129.67 ಕೋಟಿಗಳ ಮೊತ್ತವನ್ನು ಸಹಕಾರ ಸಂಘಗಳಿಗೆ ಪಾವತಿಸಲು ಬಾಕಿ ಇರುತ್ತದೆ.

ಸರ್ಕಾರದ 2018 ರ ರೂ1.00 ಲಕ್ಷ ಗಳ ಸಾಲ ಮನ್ನಾಯೋಜನೆಯಡಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಪಿಕಾರ್ಡ್ ಬ್ಯಾಂಕುಗಳಿಂದ ಬೆಳೆ ಸಾಲ ಪಡೆದ ರೈತರ ರೂ.1.00 ಲಕ್ಷಗಳವರೆಗಿನ ಸಾಲ ಮನ್ನಾ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಸರ್ಕಾರವು ಆದೇಶ ಸಂಖ್ಯೆ ಸಿಒ 163 ಸಿಎಲ್‌ಎಸ್ 2018 ದಿ.14.08.2018 ರ ರೀತ್ಯಾ ಆದೇಶ ಹೊರಡಿಸಿರುತ್ತದೆ. ಸದರಿ ಆದೇಶದನ್ವಯ ಪ್ರಾಥಮಿಕವಾಗಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ಮಾಹಿತಿ ಪಡೆಯಲಾಗಿ ಒಟ್ಟು 20.38 ಲಕ್ಷ ರೈತರಿಗೆ ರೂ.9448.62 ಕೋಟಿಗಳ ಸಾಲ ಮನ್ನಾ ಹಣ ಪಾವತಿಸಬೇಕೆಂದು ಕಂಡು ಬಂದಿರುತ್ತದೆ.

ನಂತರ ಸರ್ಕಾರವು ಈ ಯೋಜನೆಯನ್ನು ಕಾರ್ಯಗತಗೊಳಿಸುವ ಸಂಬಂಧ ಸಾಫ್ಟ್ ವೇರ್ ತಯಾರಿಸಲು ಹಾಗೂ ಉಸ್ತುವಾರಿ ಮಾಡಲು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಕರ್ನಾಟಕ ರಾಜ್ಯ, ಬೆಂಗಳೂರು ಇವರಿಗೆ ವಹಿಸಿಕೊಡಲಾಗಿ, ಸದರಿಯವರು 52 ಕಾಲಂಗಳ ಹಾಗೂ ರೈತರ ಸ್ವಯಂ ದೃಢೀಕರಣ ಪತ್ರದಲ್ಲಿನ ಮಾಹಿತಿಯನ್ನು ಅಳವಡಿಸಲು ಸಾಫ್ಟ್ ವೇರ್ ತಯಾರಿಸಿ, ಸಾಲಗಾರ ರೈತರ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ಸೂಚಿಸಿದ ಮೇರೆಗೆ, ಪ್ರತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮತ್ತು ಪಿಕಾರ್ಡ್ ಬ್ಯಾಂಕುಗಳಿಂದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿ 19.07 ಲಕ್ಷ ರೈತರಿಂದ ರೂ.9099.78 ಕೋಟಿಗಳ ಕ್ಲೇಂ ಮೊತ್ತ ಪಾವತಿಸಬೇಕೆಂದು ಗುರುತಿಸಿಕೊಳ್ಳಲಾಯಿತು.

ಪ್ರತಿ ಸಾಲಗಾರ ರೈತರ ಕ್ಲೇಂ ಮೊತ್ತದ ಸಂಬಂಧ 52 ಕಾಲಂಗಳ ಹಾಗೂ ರೈತರ ಸ್ವಯಂ ದೃಢೀಕರಣ ಪತ್ರದಲ್ಲಿನ ಮಾಹಿತಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ 17.37 ಲಕ್ಷ ಅರ್ಹ ರೈತರನ್ನು ಹಸಿರು ಪಟ್ಟಿ (Green List) ಎಂದು ಪರಿಗಣಿಸಿ ಇದರ ಬಾಬ್ತು ರೂ. 8154.98 ಕೋಟಿಗಳಾಗಿದ್ದು, ಈ ಪೈಕಿ ಈವರೆಗೆ 17.06 ಲಕ್ಷ ರೈತರ ರೂ. 7987.47 ಕೋಟಿಗಳ ಸಾಲ ಮನ್ನಾ ಹಣವನ್ನು ವಿವಿಧ ಹಂತಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಪಾವತಿಸಲಾಗಿದೆ. ಈ ಪಾವತಿಯನ್ನು ಆನ್ ಲೈನ್ ಮೂಲಕ ಫಲಾನುಭವಿ ರೈತರ ಖಾತೆಗೆ ನೇರವಾಗಿ ಜಮಾ ಮಾಡಲಾಗಿದ್ದು, ಯಾವುದೇ ನಗದು ವ್ಯವಹಾರಕ್ಕೆ ಆಸ್ಪದವಾಗಿರುವುದಿಲ್ಲ.

ಹಸಿರು ಪಟ್ಟಿಯಲ್ಲಿ ಉಳಿದ 0.31 ಲಕ್ಷ ರೈತರಿಗೆ ರೂ. 167.51 ಕೋಟಿಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯಿಂದ ಬಿಡುಗಡೆಯಾದ ಕೂಡಲೇ ವಿತರಿಸಲಾಗುವುದು.

1.57 ಲಕ್ಷ ರೈತ ಸದಸ್ಯರು ಸರ್ಕಾರವು ನಿಗದಿಗೊಳಿಸಿದ್ದ 4 ಮಾನದಂಡಗಳನ್ನು ಅನುಪಾಲಿಸಲು ವಿಫಲರಾದ ಕಾರಣ ಇವರ ಕ್ಲೇಮುಗಳನ್ನು ಸಹಕಾರ ಸಂಘಗಳಿಂದ ತಂತ್ರಾಂಶದಲ್ಲಿ ತಿರಸ್ಕರಿಸಲಾಗಿದ್ದು, ಇವರ ಬಾಬ್ತು ಕ್ಲೇಂ ಇಲ್ಲವೆಂದು ಪರಿಗಣಿಸಲ್ಪಟ್ಟಿದೆ.

ಉಳಿದ 13,334 ರೈತರ ಮಾಹಿತಿಯನ್ನು ತಂತ್ರಾಂಶದಲ್ಲಿ ಸರಿಪಡಿಸಲು ಅವಕಾಶ ಕಲ್ಪಿಸುವಂತೆ ಮತ್ತು ಮನ್ನಾ ತಂತ್ರಾಂಶದಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿ ಅರ್ಹ ರೈತರ ಪಟ್ಟಿ ನೀಡಲು ನಿಬಂಧಕರಿಂದ ಪತ್ರ ಸಂಖ್ಯೆ ಸಿಆರ್‌ಡಿ/ ಸಿಎಬಿ-1/33/2019-20, ದಿ.24.02.2022 ಮತ್ತು ಸರ್ಕಾರದಿಂದ ಅರೆ ಸರ್ಕಾರಿ ಪತ್ರ ಸಿಒ 168 ಸಿಎಲ್‌ಎಸ್ 2022 ದಿ.13.04.2022 ಗಳ ಮೂಲಕ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ರವರಿಗೆ ಕೋರಲಾಗಿದೆ.

ಸರ್ಕಾರದ ಸಾಲ ಮನ್ನಾ ಯೋಜನೆಯಡಿಯಲ್ಲಿ ಸರ್ಕಾರದಿಂದ ಸಾಲ ಮನ್ನಾ ಮಾಡಲಾದ ಮೊತ್ತವನ್ನು ಸಾಲಗಾರನ ಖಾತೆಗೆ ಜಮಾ ಆಗುವವರೆಗೆ ಹೊಸ ಸಾಲ ವಿತರಿಸಬಾರದು ಎಂಬ ಯಾವುದೇ ಷರತ್ತನ್ನು ವಿಧಿಸಲಾಗಿರುವುದಿಲ್ಲ. ಆದ್ದರಿಂದ ಸಹಕಾರ ಸಂಘಗಳ/ಬ್ಯಾಂಕುಗಳ ಹಂತದಲ್ಲಿ ಸಾಲ ಮನ್ನಾ ವ್ಯಾಪ್ತಿಗೆ ಒಳಪಟ್ಟಿರುವ ರೈತರಿಗೆ ಹೊಸದಾಗಿ ಸಾಲಗಳನ್ನು ವಿತರಿಸಲು ಯಾವುದೇ ಅಡೆತಡೆಗಳಿರುವುದಿಲ್ಲ.

**ಕಡತ ಸಂಖ್ಯೆ: ಸಿಒ 459 ಸಿಎಲ್‌ಎಸ್ 2022**

**(ಎಸ್. ಟಿ. ಸೋಮಶೇಖರ್)**
ಸಹಕಾರ ಸಚಿವರು.

C-76